## ದಿನಾಂಕ: 19–08–2008 ರಂದು ಮೆಟ್ರೋ ಸಭಾಂಗಣದಲ್ಲಿ ಮಾನ್ಯ ಶ್ರೀ. ಯಲ್ಲಪ್ಪರೆಡ್ಡಿ, ಭಾಅಸೇ, (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ನಡೆದ *"ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ"* 5ನೇ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರು

| | | | |
|---|---|---|---|
| 1 | ಮಾನ್ಯ ಶ್ರೀ. ಎ.ಎನ್. ಯಲ್ಲಪ್ಪರೆಡ್ಡಿ, *ಭಾ.ಅ.ಸೇ (ನಿ)* | ಅಧ್ಯಕ್ಷರು | 9880198549 |
| 2. | ಶ್ರೀ. ಎಸ್. ಶೇಖರ್, *ಭಾ.ಅ.ಸೇ* | ಸದಸ್ಯರು | 9980822315 |
| 3. | ಶ್ರೀ. ಎಂ. ಆರ್. ಸುರೇಶ್, *ಸ.ಅ.ಸಂ* | ಸಂಚಾಲಕರು | 9845174447 |
| 4. | ಶ್ರೀ. ಜಯರಾಮ ಭಾ.ಅ.ಸೇ<br>ಅರಣ್ಯ ಸಂರಕ್ಷಣಾಧಿಕಾರಿಗಳು<br>ಬಿ.ಎಂ.ಆರ್.ಸಿ.ಎಲ್ | ಸದಸ್ಯರು | |
| 5 | ಡಾ. ಶಿರಡಿ ಪ್ರಸಾದ್ ಟೆಕೂರ್ | ಸದಸ್ಯರು | 9448079790<br>22453655<br>26710740 |
| 6 | ಪ್ರೊ. ಎಂ. ಶೇಖರ್ ಮಧು | ಸದಸ್ಯರು | 22932245 |
| 7 | ಡಾ. ಹೆಚ್. ಪರಮೇಶ್ | ಸದಸ್ಯರು | 9845022689<br>225566738 |
| 8 | ಡಾ. ಡಿ.ಸಿ. ಶರ್ಮ | ಸದಸ್ಯರು | 9845691706<br>23322009 |
| 9 | ಶ್ರೀ. ಅಮರನಾಥ, ಎಂ.ವಿ<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು | ಸದಸ್ಯರು | – |
| 10 | ಶ್ರೀ. ರವಿ ನಾರಾಯಣ ರೆಡ್ಡಿ<br>ಮುಖ್ಯ ಅಭಿಯಂತರರು (ಬಿಡಿಎ) | ಅರ್ಜಿದಾರಸ್ಥ ಅಧಿಕಾರಿಗಳು | – |
| 11 | ಶ್ರೀ. ಕೆ. ದೇವರಾಜು<br>ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿಡಿಎ) | ಅರ್ಜಿದಾರಸ್ಥ ಅಧಿಕಾರಿಗಳು | – |
| 12 | ಶ್ರೀ. ಎಚ್.ಕೆ. ಜಗದೀಶ್<br>ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು | ಅರ್ಜಿದಾರಸ್ಥ ಅಧಿಕಾರಿಗಳು | – |
| 13 | ಶ್ರೀ. ಚಲುವಯ್ಯ<br>ತಾಂತ್ರಿಕ ಸಹಾಯಕರು (ರಸ್ತೆ ಅಗಲೀಕರಣ)<br>ಬಿ.ಬಿ.ಎಂ.ಪಿ | – | |

ಗೈರು ಹಾಜರಾದ ಸದಸ್ಯರು :

| | | | |
|---|---|---|---|
| 1 | ಡಾ. ಸುಬ್ಬರಾಯ ಪ್ರಸನ್ನ | ಸದಸ್ಯರು | 28602228 |
| 2 | ಡಾ. ಕರೋಲ್ ಉಪಾಧ್ಯಾಯ | ಸದಸ್ಯರು | 9341311453<br>22185141 |

**ಶ್ರೀ. ಸಿ. ಜಯರಾಂ, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು** :- ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್ ಇವರು ಸಭೆಗೆ ಅಧ್ಯಕ್ಷರನ್ನು ಮತ್ತು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸುತ್ತಾ, ನಮ್ಮ ಮೆಟ್ರೋ ಬಗ್ಗೆ ಸುಧೀರ್ಘವಾದ **"ಯೋಜನಾ ಮುಖ್ಯಾರ್ಥ"** (Power Point Presentation) ವನ್ನು ಮಂಡಿಸಿದರು. ಯೋಜನಾ ಮುಖ್ಯಾರ್ಥದ ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಕೂಲಂಕುಷವಾಗಿ ಮಾನ್ಯ ಅಧ್ಯಕ್ಷರ ಮತ್ತು ಗೌರವಾನ್ವಿತ ಸದಸ್ಯರ ಗಮನಕ್ಕೆ ತಂದರು.

**ಮಾನ್ಯ ಅಧ್ಯಕ್ಷರು** :- ನಮ್ಮ ಮೆಟ್ರೋ ಕಾಮಗಾರಿಗಳ ವಿವರಗಳನ್ನು ಗಮನಿಸಿ ಈ ಕಾಮಗಾರಿಗಳಿಗೆ ಉಪಯೋಗಿಸಲ್ಪಟ್ಟ ಸಿಮೆಂಟ್ ಮತ್ತು ಕಬ್ಬಿಣದ ಪ್ರಮಾಣವನ್ನು ಸಭೆಯ ಗಮನಕ್ಕೆ ತರಲು ತಿಳಿಸಿದರು. ಮುಂದುವರೆದು, ಪ್ರತಿಯೊಂದು ಕಾಮಗಾರಿಯ ಸಮಯದಲ್ಲಿ ತೆರವುಗೊಳಿಸಲು ಪ್ರಸ್ತಾಪಿಸಿರುವ ಮರಗಳ ವಿವರಗಳನ್ನು ನೀಡಲು ಕೋರಿದರು.

**ಶ್ರೀ. ಸಿ. ಜಯರಾಂ, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು** :- ಇವರು ಈ ಸಂಬಂಧ ಪ್ರತಿಕ್ರಿಯಿಸುತ್ತಾ ಮಾನ್ಯ ಅಧ್ಯಕ್ಷರು ಕೋರಿರುವಂತೆ ಕಾಮಗಾರಿಗಳಿಗೆ ಉಪಯೋಗಿಸಲ್ಪಡುವ ಸಿಮೆಂಟ್ ಮತ್ತು ಕಬ್ಬಿಣದ ವಿವರಗಳನ್ನು ಸಂಬಂಧಿಸಿದವರಿಂದ ಪಡೆದು ಸಲ್ಲಿಸಲು ಅವಕಾಶ ಕೋರಿದರು. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕಕ್ಕೆ ಈಗಾಗಲೇ ನಮ್ಮ ಮೆಟ್ರೋ ಕಾಮಗಾರಿ ಸಂಬಂಧ ತೆರವುಗೊಳಿಸಬೇಕಾದ ಮರಗಳ ಮತ್ತು ರೆಂಬೆಗಳ ವಿವರಗಳನ್ನು ಸಲ್ಲಿಸಿರುವುದಾಗಿ ತಿಳಿಸುತ್ತಾ, ಈಗಾಗಲೇ ಪ್ರಾಥಮಿಕ ಕಾಮಗಾರಿ ಪ್ರದೇಶ ಅಂದರೆ ಮೊದಲನೇ ಹಂತದ ಕಾಮಗಾರಿ ಬೈಯಪ್ಪನ ಹಳ್ಳಿಯಿಂದ ಕ್ರಿಕೆಟ್ ಸ್ಟೇಡಿಯಂ ವರೆಗೆ ಮರಗಳನ್ನು/ರೆಂಬೆಗಳನ್ನು ತೆರವುಗೊಳಿಸಲು ಅನುಮತಿ ಪಡೆದಿರುವುದಾಗಿ ತಿಳಿಸಿರುತ್ತಾರೆ. **"ಯೋಜನಾ ಮುಖ್ಯಾರ್ಥ"** ದ ರೀತ್ಯಾ ಈ ಕೆಳಗಿನಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದಾಗಿ ಸಭೆಯ ಗಮನಕ್ಕೆ ತಂದಿರುತ್ತಾರೆ.

ಮೊದಲನೇ ಹಂತ (Reach-I) – ಬೈಯಪ್ಪನ ಹಳ್ಳಿಯಿಂದ ಕ್ರಿಕೆಟ್ ಸ್ಟೇಡಿಯಂ ವರೆಗೆ
ಎರಡನೇ ಹಂತ (Reach-II) – ಸಿಟಿ ಸ್ಟೇಷನ್‌ನಿಂದ ಮೈಸೂರು ರಸ್ತೆ ವರೆಗೆ
ಮೂರನೇ ಹಂತ (Reach-III) – ಯಶವಂತಪುರದಿಂದ ಸ್ವಸ್ತಿಕ್‌ವರೆಗೆ
ನಾಲ್ಕನೇ ಹಂತ (Reach-IV) – ಸಿಟಿ ಮಾರುಕಟ್ಟೆಯಿಂದ ಆರ್.ವಿ. ರಸ್ತೆವರೆಗೆ

ಈ ಎಲ್ಲಾ ಹಂತಗಳ ಕಾಮಗಾರಿಗಳಿಗೆ ಅಡಚಣೆಯಾಗಿರುವ ಮರಗಳನ್ನು/ರೆಂಬೆಗಳನ್ನು ತೆರವುಗೊಳಿಸಲು ಈಗಾಗಲೇ ಪ್ರಸ್ತಾವನೆಗಳನ್ನು ನೀಡಿರುವುದಾಗಿ ತಿಳಿಸುತ್ತಾ, ಮೊದಲನೇ ಹಂತದ ಕಾಮಗಾರಿಗೆ ಅಡಚಣೆಯಾಗಿರುವ ಮರಗಳನ್ನು ತೆರವುಗೊಳಿಸಲು ಅನುಮತಿಯಾಗಿರುವುದಾಗಿ ತಿಳಿಸುತ್ತಾ ಕಾಮಗಾರಿ ನಿರ್ವಹಣೆ ಸಮಯದಲ್ಲಿ ಮರಗಳನ್ನು/ರೆಂಬೆಗಳನ್ನು ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ.

**ಮಾನ್ಯ ಅಧ್ಯಕ್ಷರು** :- ಈ ಸಂಬಂಧ ಪ್ರತಿಕ್ರಿಯಿಸುತ್ತಾ, ಈಗಾಗಲೇ ತೆರವುಗೊಳಿಸಲು ನೀಡಿರುವ ಮರಗಳ/ರೆಂಬೆಗಳ ಸಮಗ್ರ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ವಿಭಾಗ-2 ಇವರಿಗೆ ಸೂಚಿಸಿದರು. ಈ ಮಂಡನೆಯನ್ನು ಎರಡು ಮತ್ತು ಮೂರನೇ ಹಂತಗಳಿಗೆ ಸಂಬಂಧಿಸಿದಂತೆ ವಿವಗಳನ್ನು ಎರಡು ವಾರಗಳಲ್ಲಿ ಮಂಡಿಸಲು ಸೂಚಿಸಿದರು.

**ಡಾ. ಡಿ.ಸಿ. ಶರ್ಮಾ**:- ಇವರು ಪ್ರತಿಕ್ರಿಯಿಸುತ್ತಾ, ಯೋಜನೆಯಲ್ಲಿ ತೆರವುಗೊಳಿಸಬಹುದಾದ ಪ್ರತಿಯೊಂದು ಮರದ ವಿವರಗಳನ್ನು ಪ್ರಸ್ತಾಪಿಸಬೇಕೆಂದು ಅಭಿಪ್ರಾಯಪಟ್ಟರು.

ಶ್ರೀ. ಸಿ. ಜಯರಾಂ, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು :- ರವರು ಡಾ. ಡಿ.ಸಿ. ಶರ್ಮಾ ರವರ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಯೋಜನೆಯಲ್ಲಿ ಪ್ರಸ್ತಾವಿತ ಮರಗಳನ್ನೇ ತೆರವುಗೊಳಿಸುವ ಕ್ರಮ ತೆಗೆದುಕೊಂಡಿರುವುದಾಗಿ ತಿಳಿಸಿದರು. ಮುಂದುವರೆದು, ಎರಡು ಮತ್ತು ಮೂರನೇ ಹಂತದ ಕಾಮಗಾರಿಗಳು ತುರ್ತು ಗತಿಯಲ್ಲಿ ಚಾಲ್ತಿಯಲ್ಲಿರುವುದರಿಂದ ಮತ್ತು ಈ ಕಾಮಗಾರಿಗಳ ಟೆಂಡರ್ ಶರತ್ತುಗಳಲ್ಲಿ ಕಾಮಗಾರಿ ನಿಗಧಿತ ಅವಧಿಯಲ್ಲಿ ನಿರ್ವಹಿಸಿದರೆ ಅಧಿಲಾಭಾಂಶ ನೀಡುವ (ಬೋನಸ್), ಅವಧಿ ಮೀರಿ ನಿರ್ವಹಿಸಿದರೆ ದಂಡ ವಿಧಿಸುವ ಅವಕಾಶಗಳಿರುವುದರಿಂದ ಕಾಮಗಾರಿಗಳನ್ನು ಯಾವುದೇ ರೀತಿಯ ವಿಳಂಬಕ್ಕೆ ಅವಕಾಶ ನೀಡದೇ ನಿರ್ವಹಿಸುವುದು ಸಮಗ್ರ ಕಾಮಗಾರಿ ದೃಷ್ಟಿಯಿಂದ ಅವಶ್ಯಕವೆಂದು ತಿಳಿಸುತ್ತಾ, ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ತುರ್ತಾಗಿ ಕಾಮಗಾರಿಗೆ ಅಡಚಣೆಯಾಗದ ರೀತಿಯಲ್ಲಿ ಮರಗಳನ್ನು/ರೆಂಬೆಗಳನ್ನು ತೆರವುಗೊಳಿಸಲು ಅವಕಾಶ ನೀಡಲು ಮಾನ್ಯ ಅಧ್ಯಕ್ಷರನ್ನು ಮತ್ತು ಗೌರವಾನ್ವಿತ ಸದಸ್ಯರನ್ನು ಕೋರಿದರು.

ಮೆಟ್ರೋ ಯೋಜನೆಯ ರೀಚ್-1 ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಮರಗಳ ತೆರವುಗೊಳಿಸುವ ಕಾರ್ಯ ಸಂಪೂರ್ಣವಾಗಿದ್ದು, ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ವಿಭಾಗದ ಅಧಿಕಾರಿಗಳಿಗೆ ವಂದಿಸಿದರು.

ಮುಂದುವರೆದು, ರೀಚ್-2 ಕಾಮಗಾರಿ ಈಗ ಪ್ರಾರಂಭವಾಗಬೇಕಾಗಿದ್ದು ಅಗತ್ಯವಾಗಿ ಎರಡು ಹಂತದಲ್ಲಿ ಡಕ್ಟ್‌ಗೆ ಅಡ್ಡಬರುವ ಮರಗಳನ್ನು ತೆರವುಗೊಳಿಸುವ, ಚಾಟಣಿ ಮಾಡುವ ಕೆಲಸ ತುರ್ತಾಗಿ ಪ್ರಾರಂಭವಾಗಬೇಕಾಗಿದೆ ಎಂದು ಕೋರುತ್ತಾ ಈ ಕೆಳಕಂಡಂತೆ ಆಧ್ಯತೆಯ ಮೇರೆಗೆ ಮರಗಳನ್ನು ತೆರವುಗೊಳಿಸುವುದು/ಚಾಟಣಿ ಮಾಡುವುದು ನಿರ್ವಹಿಸಬೇಕಾಗಿದೆ ಎಂದು ವಿನಂತಿಸಿದರು.

ಆಧ್ಯತೆ-1 ಎ :- ಮರ ಸಂಖ್ಯೆ 80 ರಿಂದ 270 ರವರೆಗೆ
ಆಧ್ಯತೆ-1 ಬಿ :- ಮರ ಸಂಖ್ಯೆ 270 ರಿಂದ 463 ರವರೆಗೆ
ಆಧ್ಯತೆ-2 :- ಮರ ಸಂಖ್ಯೆ 1 ರಿಂದ 80 ರವರೆಗೆ

ಈ ಮೇಲ್ಕಂಡ ಮರ ಗಿಡಗಳನ್ನು ಆಧ್ಯತೆಯ ಮೇರೆಗೆ ತೆರವುಗೊಳಿಸಿ ಮೆಟ್ರೋ ಕಾಮಗಾರಿ ಶೀಘ್ರ ಕಾರ್ಯಗತಗೊಳಿಸಲು ಅನುವು ಮಾಡಿಕೊಡಬೇಕಾಗಿ ವಿನಂತಿಸಿದರು.

ರೀಚ್-3 ಮೆಟ್ರೋ ಕಾಮಗಾರಿಗೆ ಸಂಬಂಧಿಸಿದಂತೆ ಮೊದಲ ಹಂತದಲ್ಲಿ ಮರ ಸಂಖ್ಯೆ 1 ರಿಂದ 128 ಹಾಗೂ 2ನೇ ಹಂತದಲ್ಲಿ 129 ರಿಂದ 314 ರವರೆಗೆ ಮರಗಳನ್ನು ತೆರವುಗೊಳಿಸಬೇಕೆಂದು ಯೋಜನಾ ಪ್ರತ್ಯಾರ್ಥವನ್ನು ಮಂಡಿಸಿ ಸಭೆಯ ಆಧ್ಯ ಗಮನಕ್ಕೆ ತರಲಾಯಿತು.

ರೀಚ್-4 ಮೆಟ್ರೋ ಕಾಮಗಾರಿಗೆ ಸಂಬಂಧಿಸಿದಂತೆ ಮರ ಸಂಖ್ಯೆ 1 ರಿಂದ 100 ರವರೆಗೆ ಮೊದಲ ಹಂತದಲ್ಲಿ ಮರಗಳನ್ನು ತೆರವುಗೊಳಿಸುವ/ಚಾಟಣಿಗೊಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಪ್ರಸ್ತುತಪಡಿಸಿದರು.

ಮೆಟ್ರೋ ಕಾಮಗಾರಿಯ ಸುರಂಗ ಮಾರ್ಗಕ್ಕೆ ಸಂಬಂಧಿಸಿದಂತೆ ಶಿವಶಂಕರ ವೃತ್ತದಿಂದ ನ್ಯಾಷನಲ್ ಕಾಲೇಜ್‌ವರೆಗೆ 159 ಮರಗಳನ್ನು ತೆರವುಗೊಳಿಸಬೇಕಾಗಬಹುದೆಂದು ಈ ಬಗ್ಗೆ ಪ್ರತ್ಯೇಕವಾಗಿ ಯೋಜನಾ ಪ್ರತ್ಯರ್ಥವನ್ನು ಮಂಡಿಸುವುದಾಗಿ ತಿಳಿಸಿದರು.

**ಡಾ. ಡಿ.ಸಿ. ಶರ್ಮಾ:-** ಇವರು ಈ ಸಂಬಂಧ ಕಾಮಗಾರಿ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಭಾಗಶಃ ಮರಗಳನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವ ಬದಲಾಗಿ ಒಟ್ಟಾರೆ ಆಯಾ ಹಂತಕ್ಕೆ (Reach) ಮರಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಮಾನ್ಯ ಅಧ್ಯಕ್ಷರು :-** ಪ್ರತಿಕ್ರಿಯಿಸುತ್ತಾ, ತುರ್ತು ಕ್ರಮ ಗಮನಿಸಿ ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ತೆರವುಗೊಳಿಸಬೇಕಾದ ಮರಗಳ/ರೆಂಬೆಗಳ ಮತ್ತು ಆಯಾಕಟ್ಟಿನ ಪ್ರದೇಶದ ಒತ್ತಡವನ್ನು ಗಮನಿಸಿ ಈ ಸಂಬಂಧ ತಾತ್ವಿಕ ನೆಲೆಯಲ್ಲಿ ತೀರ್ಮಾನ ತೆಗೆದುಕೊಳ್ಳಬಹುದೆಂದು ಗೌರವಾನ್ವಿತ ಸದಸ್ಯರ ಅಭಿಪ್ರಾಯ ಕೇಳಲಾಗಿ, ಈ ಬಗ್ಗೆ ಸಭೆಯಲ್ಲಿದ್ದ ಗೌರವಾನ್ವಿತ ಸದಸ್ಯರುಗಳು ಹಾಗೂ ಅಧ್ಯಕ್ಷರು ಮೆಟ್ರೋ ಕಾಮಗಾರಿ ಬೆಂಗಳೂರು ಮಹಾನಗರದ ಅತ್ಯಂತ ಅಗತ್ಯಗಳಲ್ಲಿ ಒಂದಾಗಿದ್ದು, ಯಾವುದೇ ಕಾರಣಕ್ಕೂ ಈ ಕಾಮಗಾರಿ ಕುಂಠಿತಗೊಳ್ಳಬಾರದೆಂದು ಒಮ್ಮತದಿಂದ ಅಭಿಪ್ರಾಯಿಸಿದ ಸಮಿತಿಯು ರೀಚ್-2, ರೀಚ್-3 ಮತ್ತು ರೀಚ್-4 ನ ಮೊದಲ ಹಂತದ ಮೆಟ್ರೋ ಕಾಮಗಾರಿಗೆ ಆದ್ಯತೆಯ ಮೇರೆಗೆ ಮರಗಳನ್ನು ತೆರವುಗೊಳಿಸಲು ತಾತ್ವಿಕವಾಗಿ ಅನುಮೋದನೆ ನೀಡಲಾಯಿತು.

**ಡಾ. ಶೇಖರ್ ಮಧು :-** ಇವರು ಅಂತರ್ ಜಲ ಮಟ್ಟದ ಬಗ್ಗೆ ಅವರು ತಯಾರಿಸಿದ ವೈಜ್ಞಾನಿಕ ವಿವರಗಳ ಸಮಗ್ರ ಮಾಹಿತಿಯನ್ನು **"ಯೋಜನಾ ಮುಖ್ಯಾರ್ಥ"** (Power Point Presentation) ದ ಮುಖಾಂತರ ವಿವಿಧ ಪ್ರದೇಶಗಳ ಅಂತರ್ ಜಲ ಮಟ್ಟಗಳಲ್ಲಿರುವ ವ್ಯತ್ಯಾಸವನ್ನು ಪ್ರಸ್ತಾಪಿಸುತ್ತಾ ಸಭೆಯಲ್ಲಿ ಮಂಡಿಸಿದರು.

ಅಧ್ಯಕ್ಷರನ್ನೊಳಗೊಂಡಂತೆ ಎಲ್ಲಾ ಗೌರವಾನ್ವಿತ ಸದಸ್ಯರು ಈ **"ಯೋಜನಾ ಮುಖ್ಯಾರ್ಥ"** ದ ವಿವರಗಳನ್ನು ಗಮನಿಸಿ ನಗರದ ವಿವಿಧ ಪ್ರದೇಶಗಳಲ್ಲಿ/ವಾರ್ಡ್‌ಗಳಲ್ಲಿ ಇರುವ ಅಂತರ್ ಜಲ ಮಟ್ಟವನ್ನು ಗಮನಿಸಿ ಡಾ. ಶೇಖರ್ ಮಧು ರವರ ಪ್ರಯತ್ನವನ್ನು ಶ್ಲಾಘಿಸಿದರು.

**ಎಂ.ವಿ.ಅಮರನಾಥ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು:** ಇವರು ಬಿಡಿಎ ವತಿಯಿಂದ ನಿರ್ವಹಿಸಲ್ಪಡುತ್ತಿರುವ ಹೊರ ವರ್ತುಲ ರಸ್ತೆ ಕಾಮಗಾರಿ ಸಂಬಂಧ ಮರಗಳನ್ನು ತೆರವುಗೊಳಿಸುವ ಬಗ್ಗೆ **"ಯೋಜನಾ ಮುಖ್ಯಾರ್ಥ"** (Power Point Presentation) ವನ್ನು ಪ್ರಸ್ತುತಪಡಿಸಿದರು. ಈ ಯೋಜನಾ ಮುಖ್ಯಾರ್ಥದ ರೀತ್ಯಾ ಈ ಕೆಳಗಿನಂತೆ ಮರಗಳನ್ನು ತೆರವುಗೊಳಿಸುವ, ಸ್ಥಳಾಂತರಿಸುವ ವಿವರಗಳು ಇರುತ್ತದೆ.

ಅಗರ ಜೆಂಕ್ಷನ್‌ನಲ್ಲಿ ಈ ಕೆಳಗಿನಂತೆ ಮರಗಳನ್ನು ಕಾಮಗಾರಿಗಳ ಸಂಬಂಧ ತೆರವುಗೊಳಿಸಬೇಕಾಗಿರುತ್ತದೆ.

| | | |
|---|---|---|
| 1. ಇಬ್ಬಲೂರು ರಸ್ತೆ ಯಿಂದ ಅಗರ ವೃತ್ತ | – | 44 |
| 2. ಇಬ್ಬಲೂರು ರಸ್ತೆಯಿಂದ ಅಗರ ವೃತ್ತ ಮೀಡಿಯನ್ | – | 37 |
| 3. ಇಬ್ಬಲೂರು ರಸ್ತೆಯಿಂದ ಅಗರ ವೃತ್ತ (ಎಡಭಾಗ) | – | 25 |
| 4. ಬಿಡಿಎ ಕಾಂಪ್ಲೆಕ್ಸ್ ನಿಂದ ಅಗರ ಕೆರೆ | – | 20 |
| 5. ಬಿಡಿಎ ಕಾಂಪ್ಲೆಕ್ಸ್ ನಿಂದ ಅಗರ ಕೆರೆ ಮೀಡಿಯನ್ | – | 23 |
| 6. ಬಿಡಿಎ ಕಾಂಪ್ಲೆಕ್ಸ್ ನಿಂದ ಅಗರ ಕೆರೆ (ಬಲಭಾಗ) | – | 36 |
| 7. ಅಗರ ವೃತ್ತದ ಒಳಭಾಗ | – | 04 |
| ಒಟ್ಟು | | **189** |

ಈ ಮರಗಳ ಬದಲಾಗಿ 189 ಸಸಿಗಳನ್ನು ಆಯಾಕಟ್ಟಿನ ಪ್ರದೇಶಗಳಲ್ಲಿ ಬೆಳೆಸುವ ಅವಕಾಶವಿದೆಯೆಂದು ಪ್ರಸ್ತುತಪಡಿಸಿದರು.

ಒಟ್ಟಾರೆ 189 ಮರಗಳಲ್ಲಿ 90 ಮರಗಳನ್ನು ಸ್ಥಳಾಂತರಿಸಲು ಅವಕಾಶವಿದೆಯೆಂದು ಮತ್ತು ಈ ಮರಗಳನ್ನು ಆಯಾಕಟ್ಟಿನ ಪ್ರದೇಶಗಳಲ್ಲಿ ಮತ್ತು ಆವರ್ತದಲ್ಲಿರುವ ರಸ್ತೆಗಳಲ್ಲಿ ಸ್ಥಳಾಂತರ ಮಾಡಬಹುದೆಂದು ತಿಳಿಸಿದರು.

**ಮಾನ್ಯ ಅಧ್ಯಕ್ಷರು** :- ಪ್ರತಿಕ್ರಿಯಿಸುತ್ತಾ, ಅಗರಂ ಕೆರೆ ಅಂಗಳದಲ್ಲಿ ಸಸಿಗಳನ್ನು ಬೆಳೆಸಲು ಅವಕಾಶವಿದ್ದು, ಈ ಕ್ರಮವನ್ನು ನಿರ್ವಹಿಸಲು ಅಪೇಕ್ಷಿಪಟ್ಟರು. ಮುಂದುವರೆದು, ಅಂಜನಾಪುರ ಬಡಾವಣೆಯಲ್ಲಿ ಲಭ್ಯವಿರುವ ಸ್ಥಳಗಳಲ್ಲಿ ಸಸಿಗಳನ್ನು ಬೆಳೆಸಬೇಕೆಂದು ತಿಳಿಸಿದರು. ಒಟ್ಟಾರೆ 50% ಅಂದರೆ 93 ಮರಗಳನ್ನು ಉಳಿಸಿಕೊಳ್ಳುವ ಅವಕಾಶವಿದ್ದು ಅವುಗಳನ್ನು ಉಳಿಸಿಕೊಳ್ಳಲು ಸೂಚಿಸಿದರು. 50 ಮರಗಳನ್ನು ಆಯಾಕಟ್ಟಿನ ಪ್ರದೇಶದಲ್ಲಿರುವ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣವು 26 ಎಕರೆಯಷ್ಟಿದ್ದು, ಇಲ್ಲಿಯೂ ಸಹ ಸಸಿಗಳನ್ನು ಬೆಳೆಸಲು ತಿಳಿಸಿದರು.

**ಬಿಡಿಎ ಅಭಯಂತರರು** :- ಇವರು ಅಗರಂ ಕೆರೆಯ ಸ್ವಲ್ಪ ಭಾಗದ ಪ್ರದೇಶವನ್ನು ಕಾಲೇಜು ಕಟ್ಟಡಕ್ಕೆ ನೀಡಿರುವುದಾಗಿ ತಿಳಿಸಿದರು.

**ಮಾನ್ಯ ಅಧ್ಯಕ್ಷರು** ಇದಕ್ಕೆ ಪ್ರತಿಕ್ರಿಯಿಸುತ್ತಾ, ಉಚ್ಚನ್ಯಾಯಾಲಯದ ಆದೇಶದ ವ್ಯಾಪ್ತಿಯಲ್ಲಿ ಯಾವುದೇ ಪ್ರದೇಶವನ್ನು ಕಾಲೇಜು ಕಟ್ಟಡ ಮುಂತಾದವುಗಳಿಗೆ ನೀಡುವುದು ನ್ಯಾಯಾಲಯದ ತೀರ್ಪಿನ ಉಲ್ಲಂಘನೆಯಾಗುತ್ತದೆ. ಒಂದು ವೇಳೆ ಕಾಲೇಜು ಕಟ್ಟಡಕ್ಕೆ ಈ ಪ್ರದೇಶದಲ್ಲಿ ಸ್ಥಳಾವಕಾಶ ನೀಡಿದ್ದಲ್ಲಿ ಅದನ್ನು ಕೂಡಲೇ ರದ್ದುಪಡಿಸುವ ಕ್ರಮ ತೆಗೆದುಕೊಳ್ಳಲು ಅಭಯಂತರರಿಗೆ ಸೂಚಿಸಿದರು. ಈ ಕ್ರಮವನ್ನು ಜರುಗಿಸದೇ ಇದ್ದಲ್ಲಿ ಈ ಸಮಿತಿಯು ನ್ಯಾಯಾಲಯಕ್ಕೆ ಈ ವಿಷಯದಲ್ಲಿ ಸೂಕ್ತ ಅಭಿಪ್ರಾಯ ಮಂಡಿಸಿ ನ್ಯಾಯಾಲಯದ ಆದೇಶದ ಉಲ್ಲಂಘನೆ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳಲು ವರದಿ ನೀಡುವುದಾಗಿ ಎಚ್ಚರಿಕೆ ನೀಡುತ್ತಾ ಈ ಸಂಬಂಧ ಕೂಡಲೇ ಅಗತ್ಯ ತಿದ್ದುಪಡಿ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಡಿಎ ಇವರಿಗೆ ಈ ವಿಷಯದಲ್ಲಿ ಎಲ್ಲಾ ವಿವರಗಳನ್ನು ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಮತ್ತು ಕಾಲೇಜು ಕಟ್ಟಡಕ್ಕೆ ಅವಕಾಶ ನೀಡಿದ್ದಲ್ಲಿ ಈ ಸಂಬಂಧ ಎಲ್ಲಾ ವಿವರಗಳನ್ನು ಮುಂದಿನ ಸಭೆಯಲ್ಲಿ ಹಾಜರು ಪಡಿಸಲು ಸೂಚನೆ ನೀಡಿದರು.

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳು:** ಇವರು ಒಟ್ಟಾರೆ 46 ಮರಗಳನ್ನು ತೆರವುಗೊಳಿಸಲು ಕೋರಿದರು. ಒಟ್ಟಾರೆ ಆಯಾಕಟ್ಟಿನ ಸ್ಥಳಗಳಲ್ಲಿ 189 ವಿವಿಧ ಜಾತಿಯ ಸಸಿಗಳನ್ನು ಬೆಳೆಸುವ ಅವಕಾಶವಿದ್ದು, ಈ ಕಾರ್ಯವನ್ನು ನಿರ್ವಹಿಸಲಾಗುವುದೆಂದು ತಿಳಿಸಿದರು.

**ಮಾನ್ಯ ಅಧ್ಯಕ್ಷರು:-** ಇವರು ಅಗರಂ ಕೆರೆ ಅಂಗಳದಲ್ಲಿ, ಆಯಾಕಟ್ಟಿನ ಪ್ರದೇಶಗಳಲ್ಲಿ, ಇಂಟರ್‌ನ್ಯಾಷನಲ್ ಸ್ಕೂಲ್ ಆವರಣ ಮತ್ತು ಅಂಜನಾಪುರ ಬಡಾವಣೆ ಮುಂತಾದ ಸ್ಥಳಗಳಲ್ಲಿ ಸಸಿಗಳನ್ನು ನೆಡಲು ಕ್ರಮ ತೆಗೆದುಕೊಳ್ಳಲು ಮತ್ತೇ ಸೂಚಿಸುತ್ತಾ, ಗೌರವಾನ್ವಿತ ಸದಸ್ಯರ ಅನುಮೋದನೆಗಳೊಡನೆ ಕೋರಿರುವ ಮರಗಳನ್ನು ತೆರವುಗೊಳಿಸಲು ಅನುಮತಿ ನೀಡಿದರು.

ದಿನಾಂಕ: 05-09-2008 ರಂದು ಬೆಳಿಗ್ಗೆ 10.30 ಕ್ಕೆ ಬಿ.ಎಂ.ಆರ್.ಸಿ.ಎಲ್ ಸಭಾಂಗಣದಲ್ಲಿ ಮತ್ತೇ ಸಭೆ ಸೇರಲು ತೀರ್ಮಾನಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು